**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಗಳವರ**
**ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

ಎಂ ವಿ ಸಿ ನಂ. **93/2022**

ಆರ್ ಡಬ್ಲ್ಯೂಃ 2

| | |
|---|---|
| ಸಾಕ್ಷಿಯ ಹೆಸರು | ದೇವರಾಜು |
| ತಂದೆಯ ಹೆಸರು | ರಾಮಚಂದ್ರಯ್ಯ |
| ವಯಸ್ಸು | 41 ವರ್ಷ |
| ಉದ್ಯೋಗ | ಎಸ್ ಡಿ ಎ ಆರ್ ಟಿ ಒ |
| ವಾಸ | ಚಿಕ್ಕಮಗಳೂರು |

ದಿನಾಂಕ 23-01-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ 3 ನೇ ಎದುರುದಾರರ ಪರಃ ಶ್ರೀ ಸಿ ಜೆ ಎಂ ವಕೀಲರಿಂದಃ

ನನಗೆ ಮಾನ್ಯ ನ್ಯಾಯಾಲಯದಿಂದ ಹೆಚ್ ಆರ್ ದೇವರಾಜ್ ಬಿನ್ ರತ್ನಸ್ವಾಮಿ, ಹೋಚಿಹಳ್ಳಿ, ಯಗಟಿ ಹೋಬಳಿ, ಕಡೂರು ತಾಲ್ಲೂಕು ಇವರಿಗೆ ಸಂಬಂದಪಟ್ಟ ಚಾಲನಾ ಪರವಾನಿಗಿಯ ಬಗ್ಗೆ ವಿವರಣೆಯನ್ನು ಹಾಜರುಪಡಿಸುವಂತೆ ನನ್ನ ಮೇಲಾಧಿಕಾರಿಗಳಿಗೆ ನಿರ್ದೇಶನ ಬಂದಿದ್ದು ಅದರಂತೆ ಸದರಿ ದಾಖಲೆಯನ್ನು ಹಾಜರುಪಡಿಸುವಂತೆ ನನ್ನ ಮೇಲಾಧಿಕಾರಿಗಳು ನನ್ನನ್ನು ನಿಯೋಜಿಸಿರುತ್ತಾರೆ. ಮಾನ್ಯ ನ್ಯಾಯಾಲಯದಿಂದ ನಿರ್ದೇಶಸಲ್ಪಟ್ಟ ದಾಖಲೆಗಳನ್ನು ಸಂಬಂದಪಟ್ಟ ಕಡತಗಳಲ್ಲಿ ಮತ್ತು ಕಂಪ್ಯೂಟರ್ ದಾಖಲೆಗಳನ್ನು ಪರಿಶೀಲಿಸಲಾಗಿ ಮೇಲ್ಕಂಡವರ ಹೆಸರಿನಲ್ಲಿ ನಮ್ಮ ಪ್ರಾದೇಶಿಕ ಕಚೇರಿಯಿಂದ ಯಾವುದೇ ಚಾಲನಾ ಪರವಾನಿಗಿಯನ್ನು ಹೊರಡಿಸಲಾಗಿರುವುದಿಲ್ಲ. ಆ ಬಗ್ಗೆ ನಾನು ಹಿಂಬರಹವನ್ನು

ಹಾಜರುಪಡಿಸಿರುತ್ತೇನೆ. ಸದರಿ ಹಿಂಬರಹವನ್ನು ನಿಆರ್-10 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಅರ್ಜಿದಾರರ ಪರಃ ಶ್ರೀ ಹೆಚ್ ಎನ್ ಎಸ್ ವಕೀಲರಿಂದಃ</u>

1 ನೇ ಎದುರುದಾರರಿಗೆ ಸೂಕ್ತವಾದ ಚಾಲನಾ ಪರವಾನಿಗಿ ಇದ್ದು, ನಾನು ಕಡತಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ ನಿಆರ್-10 ರಂತೆ ಸುಳ್ಳು ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.